ಉಳಿದುಬಂದಿರುವುದಕ್ಕೆ ಕಾರಣ, ಇದು ಪ್ರಕೃತಿಯಲ್ಲಡಗಿರುವ ಸತ್ಯ ಎಂಬ ಕಾರಣಕ್ಕೆ. ಈ ಸತ್ಯವನ್ನು ಪ್ರಕೃತಿ ಸಂಶ್ಲೇಷಿಸಿ, ಸಂಗ್ರಹಿಸಿ ಮನುಷ್ಯನ ಅಂತರಾತ್ಮನನ್ನು ಕೊರೆದು ಒಳಗೆ ಇರಿಸಿದೆ. ಯಾರಲ್ಲಿ ಈ ಎಚ್ಚರ ಎಂದರೆ ಪರಿಪೂರ್ಣತೆಯ ತುಡಿತ ಕೆಲಸ ಮಾಡುತ್ತಿದೆಯೋ ಅವನು ಅಮೂರ್ತದಿಂದ ಮೂರ್ತದೆಡೆಗೆ ಪ್ರಯಾಣ ಮಾಡುತ್ತಾನೆ.

ಪರಮಸತ್ಯವನ್ನು ಅರಿಯಲೇಬೇಕೆಂಬ ಹಂಬಲವನ್ನು ಕುರಿತು ವಿವೇಕಾನಂದರು ಕೊಟ್ಟಿರುವ ಸ್ಪಷ್ಟನೆಗಳು ಮನುಕುಲದ ಅರಿವಿಗೆ ಹೊಸ ಬೆಳಕನ್ನು ಚೆಲ್ಲುತ್ತವೆ. ವಾಸ್ತವ ಜಗತ್ತಿನ ಮೇಲೆ ನಮಗಿರುವ ಪ್ರೀತಿ ಮತ್ತು ಪರಮಸತ್ಯದ ಹಂಬಲ – ಈ ಎರಡೂ ಸಮಾನಾಂತರವಾಗಿ ಮನುಷ್ಯನ ಇತಿಹಾಸದುದ್ದಕ್ಕೂ ಜೀವಂತವಾಗಿ ನಡೆದು ಬಂದಿದೆ. ಇದು ಏನನ್ನು ಸೂಚಿಸುತ್ತದೆ ಎಂದರೆ ಪರಮಸತ್ಯ ಎಂಬುದು ನಾವು ಗ್ರಹಿಸುವ ವಸ್ತುನಿಷ್ಠ ಸತ್ಯದಷ್ಟೇ ಸತ್ಯ. ಯಾವುದು ವಾಸ್ತವವಲ್ಲವೋ ಅದು ನಮ್ಮ ಆಲೋಚನಾಲಹರಿಗೆ ಪ್ರವೇಶಿಸುವುದೇ ಇಲ್ಲ. ಒಂದು ಅಂಶವನ್ನು ನಾವಿಲ್ಲಿ ಗುರುತಿಸಲೇಬೇಕು. 'ವಾಸ್ತವ' ಎಂಬುದು ಮೂರ್ತರೂಪದಲ್ಲಿರುವ ವಸ್ತು ಮಾತ್ರ ಆಗಿರಲು ಸಾಧ್ಯವೆಂದು ನಾವು ಪರಿಗಣಿಸಬಾರದು. ವಾಸ್ತವ ಎಂಬುದು ಅಮೂರ್ತ ಸತ್ಯವೂ ಆಗಿರಬಹುದು.

ಮನುಷ್ಯನ ಅಸ್ತಿತ್ವಕ್ಕೆ ವಸ್ತುವಿಗಿಂತ ತತ್ತ್ವವೇ ಮುಖ್ಯ ಕಾರಣ. ಇದು ಹೇಗೆಂದು ಅರಿಯಲು ಆಮ್ಲಜನಕ, ಜಲಜನಕ ಸೇರಿ ನೀರಾಗುವ ತತ್ತ್ವವನ್ನು ಅರ್ಥಮಾಡಿಕೊಳ್ಳೋಣ. ಆಮ್ಲಜನಕ ಮತ್ತು ಜಲಜನಕ – ಈ ಎರಡು ಅನಿಲಗಳು ಸೇರಿ ನೀರಾಗುತ್ತದೆ. ವಸ್ತುನಿಷ್ಠ ಪ್ರಪಂಚದಲ್ಲಿ ಇವುಗಳಷ್ಟೇ ವಾಸ್ತವ. ಆದರೆ ಯಾವ ತತ್ತ್ವ ಈ ಸಂಯೋಗವನ್ನು ನೀರನ್ನಾಗಿಸುತ್ತದೋ, ಅನಿಲಗಳನ್ನು ದ್ರವವಾಗಿಸುತ್ತದೆಯೋ ಅದು ಅಮೂರ್ತತತ್ತ್ವ. ಎರಡು ಅನಿಲಗಳು ಸೇರಿ ನೀರಿನಂತಹ ದ್ರವವೇ ಏಕಾಗಬೇಕು? ಏಕೆಂದರೆ ಇದೊಂದು ಶಾಶ್ವತ ಸತ್ಯ, ತರ್ಕವನ್ನು ಮೀರಿದ ತತ್ತ್ವ. ಈ ಅಮೂರ್ತ ತತ್ತ್ವದ ಅಸ್ತಿತ್ವವಿಲ್ಲದೇ ಮೂರ್ತರೂಪದ ನೀರು ಹುಟ್ಟುವುದು ಅಸಾಧ್ಯ. ಈ ತತ್ತ್ವ ನಮಗೆ ಕಾಣುವುದಿಲ್ಲ ಎಂಬ ಕಾರಣಕ್ಕೆ ಇದನ್ನು ಇಲ್ಲ ಎಂದು ಹೇಳಬಹುದೆ? ಹಾಗೆಯೇ ಆತ್ಯಂತಿಕ ಸತ್ಯವೂ ಕೂಡ. ಈ ಸತ್ಯ ಇದೆ; ಆದಕಾರಣವೇ ಭಕ್ತಿಯಿಂದಾಗಲಿ, ಜ್ಞಾನದಿಂದಾಗಲಿ ಅಥವಾ ಕರ್ಮದಿಂದಾಗಲಿ ಅದನ್ನು ಪಡೆಯುವುದೇ ಮನುಷ್ಯ ಜನ್ಮದ ಗುರಿ. ●

---

## ಬದುಕಿಗೊಂದು ಬೆಳಕು

### ಮಹಾನುಭಾವರು ಯಾರು?

ತಮ್ಮ ಆವಶ್ಯಕತೆಗಳನ್ನಷ್ಟೇ ಪೂರೈಸಿಕೊಳ್ಳಲು ದುಡಿಯುವುದು ಮಾನವರಿಗೆ ಸಲ್ಲದು. ಒಂದು ಮೂಕಪ್ರಾಣಿಯೂ ಸಹ ತನ್ನಿಂದಾದಷ್ಟು ಪರರಿಗೆ ಉಪಯೋಗವಾಗುವಂತೆ ಬದುಕುತ್ತದೆ. ಪರರಿಗಾಗಿ ಅಲ್ಪಸ್ವಲ್ಪವಾದರೂ ಉಪಕಾರ ಮಾಡದೆ ಜೀವಿಸಿದರೆ, ಬದುಕಿದ್ದೂ ಸತ್ತಂತೆ ಎನ್ನುತ್ತಾರೆ ಸ್ವಾಮಿ ವಿವೇಕಾನಂದರು.

ಇದಕ್ಕಾಗಿ ಸುಂದರವಾದ ಕತೆಯೊಂದರ ಪರಿಚಯ ಮಾಡಿಕೊಳ್ಳುವುದು ಉಚಿತ. ಚೀನಾದ ಮಹಾನ್ ವ್ಯಕ್ತಿ ಕನ್‌ಫ್ಯೂಷಿಯಸ್‌ನ ಬಳಿಗೆ ಒಂದು ದಿನ ಚೀನಾದ ಚಕ್ರವರ್ತಿ ಬಂದು ಹೇಳುತ್ತಾನೆ, "ರಾಜ್ಯದಲ್ಲಿ ಎಲ್ಲೆಲ್ಲೂ ಸುಳ್ಳು, ತಟವಟ, ಮೋಸ– ವಂಚನೆಗಳೇ ಕಂಡುಬರುತ್ತಿವೆ. ಸದಾಚಾರಸಂಪನ್ನನಾಗಿ, ಸತ್ಯವಂತನಾಗಿರುವ ಒಬ್ಬ ವ್ಯಕ್ತಿ ಯಾದರೂ ಈ ರಾಜ್ಯದಲ್ಲಿ ಇದ್ದಾನೆಯೆ?"


**ಕನ್‌ಫ್ಯೂಷಿಯಸ್:** "ಇಲ್ಲದೆ ಏನು! ಸ್ವಯಂ ಚಕ್ರವರ್ತಿಗಳೇ ಇದ್ದಾರಲ್ಲ. ನಿಮ್ಮಂತಹ ಸತ್ಯಶೋಧಕರನ್ನು ನಾನು ಮಹಾನುಭಾವರೆಂದೇ ಭಾವಿಸುತ್ತೇನೆ."

ಇದಕ್ಕೆ ಚಕ್ರವರ್ತಿ, "ನಿಮ್ಮ ದೃಷ್ಟಿಯಲ್ಲಿ ನಾನೊಬ್ಬ ಮಹಾನುಭಾವನಾಗಿದ್ದರೆ, ಅದೇ ರೀತಿಯ ಮತ್ತೊಬ್ಬ ವ್ಯಕ್ತಿಯನ್ನು ಕಾಣಬಯಸುತ್ತೇನೆ" ಎಂದಾಗ, ಹಾಗಾದರೆ "ನಾನೇ ಆ ವ್ಯಕ್ತಿ" ಎನ್ನುತ್ತಾನೆ ಕನ್‌ಫ್ಯೂಷಿಯಸ್. ಇದಕ್ಕೆ ಪ್ರತಿಯಾಗಿ ಚಕ್ರವರ್ತಿ ಮತ್ತೊಂದು ಪ್ರಶ್ನೆ ಕೇಳುತ್ತಾನೆ. "ತಮಗಿಂತಲೂ ಉತ್ತಮ ಮಾನವನನ್ನು ಕಾಣುವ ಅಪೇಕ್ಷೆ ನನ್ನದು, ತೋರಬಲ್ಲಿರಾ?"

ಆಗ ಚಕ್ರವರ್ತಿಯನ್ನೇ ದಿಟ್ಟಿಸಿ ನೋಡುತ್ತ ಕನ್‌ಫ್ಯೂಷಿಯಸ್ ಹೀಗೆ ಹೇಳುತ್ತಾನೆ: "ಅಂಥವರಿಗಾಗಿ ಹುಡುಕಿಕೊಂಡು ಎಲ್ಲಿಗೂ ಹೋಗಬೇಕಾಗಿಲ್ಲ. ಅಂತಹ ವ್ಯಕ್ತಿಗಳು ನಮ್ಮ ಸುತ್ತಮುತ್ತಲಲ್ಲೇ ಸಿಗುತ್ತಾರೆ. ಆದರೆ ನಾವು ನೋಡುವ ದೃಷ್ಟಿ ಸರಿಯಾಗಿದ್ದಾಗ ಮಾತ್ರ ಅಂಥವರನ್ನು ಕಾಣಬಲ್ಲೆವು."

"ಅದೋ ನೋಡಿ, ಅಲ್ಲಿ ಎದುರಿಗೆ ಒಬ್ಬ ವಯೋವೃದ್ಧೆ ಗುದ್ದಲಿಯಿಂದ ಬಾವಿ ತೋಡುವುದಕ್ಕಾಗಿ ಭೂಮಿಯನ್ನು ಅಗೆಯುತ್ತಿದ್ದಾಳೆ. ಈ ಇಳಿವಯಸ್ಸಿನಲ್ಲಿ ಇದು ಅನಾವಶ್ಯಕ. ಯಾವಾಗ ಕಾಲನ ಕರೆ ಬರುವುದೋ ತಿಳಿಯದು. ಅವಳು ಬಾವಿಯ ನೀರನ್ನು ಉಪಯೋಗಿಸುವಷ್ಟು ದಿನ ಬದುಕಿರುತ್ತಾಳೋ ಇಲ್ಲವೋ ಗೊತ್ತಿಲ್ಲ. ಕೇವಲ ತನಗಾಗಿಯೇ ಎಂದು ಬಾವಿ ತೋಡುತ್ತಿದ್ದರೆ, ಅದು ಪ್ರಯೋಜನವಿಲ್ಲದ ಕೆಲಸ. ಆದರೆ ಅವಳು ತನಗಾಗಿ ತೋಡುತ್ತಿಲ್ಲ, ಅದರ ನೀರು ಹತ್ತಾರು ಜನರ ಉಪಯೋಗಕ್ಕೆ ಆಗಲಿ ಎಂದೇ ತೋಡುತ್ತಿದ್ದಾಳೆ. ಇಂಥವರೇ ಮಹಾನುಭಾವರು. ಇವರು ಇಹದಲ್ಲಿ ನಿಷ್ಕಾಮರಾಗಿ ದುಡಿಯುತ್ತಾರೆ, ಪರದಲ್ಲಿಯೂ ಗೌರವಾನ್ವಿತರಾಗಿ ಅಮರರಾಗುತ್ತಾರೆ." ●

(**ಹಿಂದಿ ಮೂಲ:** *ಶರತ್‌ಚಂದ್ರ ಪೆಂಢಾರ್‌ಕರ್,*
**ಅನುವಾದ:** *ಸಿ.ಎಸ್. ಮಂಗಳಮ್ಮ*)



# ಉಪನಿಷನ್ಮಂಜರಿ

ಸ್ವಾಮಿ ವಿವೇಕಾನಂದರು ಉಪನಿಷತ್ತುಗಳಿಗೆ ಬಹಳ ಮಹತ್ವವನ್ನು ನೀಡಿದ್ದರು. "ನಾನು ಉಪನಿಷತ್ತುಗಳಲ್ಲದೆ ಬೇರೆ ಏನನ್ನೂ ಬೋಧಿಸಿಲ್ಲ" ಎಂದು ಅವರು ಘೋಷಿಸಿದ್ದರು. ಉಪನಿಷತ್ತುಗಳ ಸಂದೇಶದ ಸಾರಸರ್ವಸ್ವವನ್ನು ಸ್ವಾಮಿ ವಿವೇಕಾನಂದರ ಭಾಷಣಗಳಲ್ಲಿ ಕಾಣಬಹುದು. ಹೀಗೆ ಸ್ವಾಮಿ ವಿವೇಕಾನಂದರಿಗೆ ಅತ್ಯಂತ ಪ್ರಿಯವಾದುವು ಉಪನಿಷತ್ತುಗಳು. ಅವುಗಳಲ್ಲಿ ಮುಖ್ಯವಾದ ಹತ್ತು ಉಪನಿಷತ್ತುಗಳ ಪರಿಚಯವನ್ನು ಈ ಸಂಚಿಕೆಯಿಂದ ಪ್ರಾರಂಭಿಸುತ್ತಿದ್ದೇವೆ. ಭಾರತೀಯ ತತ್ತ್ವಶಾಸ್ತ್ರದ ಮೇರುಶಿಖರಗಳಾದ ಇವುಗಳ ಸರಳ ಪರಿಚಯವನ್ನು ವಿವಿಧ ಪಂಡಿತರು, ಸ್ವಾಮೀಜಿಯವರು ಮಾಡಿಕೊಡಲಿದ್ದಾರೆ. ಸ್ವಾಮಿ ವಿವೇಕಾನಂದರ ೧೫೦ನೇ ಜಯಂತಿಯ ಅಂಗವಾಗಿ, ಅವರಿಗೆ ಸಮರ್ಪಿತವಾದ ಈ ಉಪನಿಷನ್ಮಂಜರಿಯ ಮೊದಲ ಲೇಖನವನ್ನು ಬರೆದುಕೊಟ್ಟಿರುವ ಸನ್ಮಾನ್ಯ ಶ್ರೀ ಎನ್. ರಂಗನಾಥ ಶರ್ಮರು ಕನ್ನಡನಾಡಿನ ಅತ್ಯಂತ ಹಿರಿಯ ಸಂಸ್ಕೃತಜ್ಞರು. ಇವರು ಹಲವಾರು ಗ್ರಂಥಗಳನ್ನು ಬರೆದಿದ್ದಾರೆ ಮತ್ತು 'ವಾಲ್ಮೀಕಿ ರಾಮಾಯಣ', 'ವಿಷ್ಣುಪುರಾಣ' ಮುಂತಾದ ಪುರಾತನ ಗ್ರಂಥಗಳನ್ನು ಕನ್ನಡಕ್ಕೆ ಸಮರ್ಥವಾಗಿ ಅನುವಾದಿಸಿದ್ದಾರೆ. 'ವಿವೇಕಪ್ರಭ'ಕ್ಕಾಗಿ ಈ ಅಮೂಲ್ಯ ಲೇಖನವನ್ನು ದಯಪಾಲಿಸಿರುವ ಈ ಮಹನೀಯರಿಗೆ ನಮ್ಮ ಕೃತಜ್ಞತೆಗಳು.

## ತೈತ್ತಿರೀಯೋಪನಿಷತ್ತುಗಳ ಮಹತ್ವ

**ಮಹಾಮಹೋಪಾಧ್ಯಾಯ ವಿದ್ವಾನ್ ಎನ್. ರಂಗನಾಥ ಶರ್ಮಾ**

ಶೀಕ್ಷಾ, ಬ್ರಹ್ಮ, ಭೃಗುವಲ್ಲಿಗಳು ತೈತ್ತಿರೀಯ ಶಾಖೆಯಲ್ಲಿ ಪ್ರಸಿದ್ಧವಾದ ಉಪನಿಷತ್ತುಗಳು. ಇವುಗಳಿಗೆ ಶ್ರೀ ಶಂಕರ ಭಗವತ್ಪಾದರ ಭಾಷ್ಯವಿದೆ. ಮನುಷ್ಯನು ತನ್ನ ಸಮಗ್ರ ಜೀವನ ವನ್ನು ಸಾರ್ಥಕಪಡಿಸಿಕೊಂಡು, ಮನುಷ್ಯ ಜನ್ಮದಿಂದ ಕೃತಕೃತ್ಯ ನಾಗಲು ಬೇಕಾದ ವಿಷಯಗಳೆಲ್ಲವನ್ನೂ ಈ ಮೂರು ಉಪನಿಷತ್ತುಗಳು ಬೋಧಿಸುತ್ತವೆ. ಆದ್ದರಿಂದ ಇವು ಎಲ್ಲಾ ಉಪನಿಷತ್ತುಗಳ ಪ್ರಾತಿನಿಧಿಕ ಸ್ವರೂಪವನ್ನು ಪಡೆದುಕೊಂಡಿವೆ ಎನ್ನಬಹುದು.

ಶೀಕ್ಷಾವಲ್ಲಿಯು ವೇದಾಧ್ಯಯನಕ್ಕೆ ಉಪಯುಕ್ತವಾಗುವಂತೆ ಅಕಾರಾದಿ ವರ್ಣಗಳನ್ನೂ, ಉದಾತ್ತಾದಿ ಸ್ವರಗಳನ್ನೂ ಸರಿಯಾಗಿ ಉಚ್ಚರಿಸಬೇಕೆಂದು ಸಂಕ್ಷೇಪವಾಗಿ ತಿಳಿಸುತ್ತದೆ. ವೇದಾಂಗವಾದ ಶೀಕ್ಷಾಶಾಸ್ತ್ರದಲ್ಲಿ ಅಕ್ಷರೋಚ್ಚಾರಣ ವಿಧಿಯು ವಿಸ್ತೃತವಾಗಿ ವರ್ಣಿಸಲ್ಪಟ್ಟಿದೆ. ಈ ಪ್ರಕಾರದಲ್ಲಿ ವೇದಾಧ್ಯಯನ ಮಾಡಿದ ಮೇಲೆ ವಿದ್ಯಾರ್ಥಿಯು ಗುರುಕುಲದಿಂದ ನಿರ್ಗಮಿಸು ತ್ತಾನೆ. ಆಗ ಆಚಾರ್ಯನು ಶಿಷ್ಯನಿಗೆ ಮಾಡುವ ಉಪದೇಶವು ಮನನೀಯವಾದುದು. **ಸತ್ಯಂ ವದ । ಧರ್ಮಂ ಚರ ।** – "ನೀನು ಇಲ್ಲಿ ಕಲಿತ ವೇದಶಾಸ್ತ್ರಾದಿಗಳನ್ನು ಮತ್ತೆ ಮತ್ತೆ ಅನು ಸಂಧಾನ ಮಾಡುತ್ತಿರಬೇಕು. ಅದನ್ನೆಂದಿಗೂ ತಪ್ಪಿಸಬಾರದು. ವಿವಾಹವನ್ನು ಮಾಡಿಕೊಂಡು ಸಂತತಿಯನ್ನು ಪಡೆದು, ನಿನ್ನ ಪಿತೃವಂಶವು ವಿಚ್ಛೇದ ಹೊಂದದಂತೆ ನೋಡಿಕೊಳ್ಳುವುದು ನಿನ್ನ ಕರ್ತವ್ಯ. ತಾಯಿ ತಂದೆಯರನ್ನು, ಗುರುವನ್ನು ದೇವರೆಂದು ತಿಳಿದು, ಅವರ ಶುಶ್ರೂಷೆಯನ್ನು ಮಾಡುತ್ತಿರು. ಗೃಹಸ್ಥನಾಗಿ ಧರ್ಮಮಾರ್ಗದಿಂದ ಹಣ ಸಂಪಾದಿಸಿ, ವಿದ್ಯಾರ್ಥಿಗಳಿಗೂ, ಸಂನ್ಯಾಸಿಗಳಿಗೂ, ಯೋಗ್ಯರಾದ ಯಾಚಕರಿಗೂ, ಅನ್ನವನ್ನು ನೀಡುವುದು ನಿನ್ನ ಕರ್ತವ್ಯ. ಇದು ಗೃಹಸ್ಥನ ಧರ್ಮ. ಈ ಬಗೆಯ ದಾನವನ್ನು ಶ್ರದ್ಧೆಯಿಂದಲೂ ವಿನಯದಿಂದಲೂ ಮಾಡತಕ್ಕದ್ದು. ನೀನು ಕಲಿತ ವಿದ್ಯೆಯನ್ನು ಪ್ರವಚನಾದಿಗಳಿಂದ ಅನ್ಯರಿಗೆ ತಿಳಿಸಿಕೊಡಬೇಕಾದದ್ದು ನಿನ್ನ ಕರ್ತವ್ಯ. ಋಷಿಗಳೂ ಪ್ರಾಚೀನ ವಿದ್ವಾಂಸರೂ ಕಷ್ಟಪಟ್ಟು ಈ ಜ್ಞಾನವನ್ನು ಸಂಪಾದಿಸಿ ಉಳಿಸಿಕೊಟ್ಟಿರುವುದು ಸಕಲ ಪ್ರಜೆಗಳ ಹಿತಕ್ಕಾಗಿಯೇ ಸರಿ. ಆದ್ದರಿಂದ ಗುರುಶಿಷ್ಯ ಸಂಪ್ರದಾಯವು ಅನುಸ್ಯೂತವಾಗಿ ಮುಂದೆಯೂ ನಡೆಯುತ್ತಾ ಹೋಗಬೇಕು" – ಈ ಬಗೆಯ ಉಪದೇಶಗಳು ಎಷ್ಟು ಅರ್ಥವತ್ತಾದವುಗಳೆಂಬುದನ್ನು ನಾವು ಗಮನಿಸಬೇಕು.

ವೇದವು 'ಪ್ರವೃತ್ತಿ ಮಾರ್ಗ' ಮತ್ತು 'ನಿವೃತ್ತಿ ಮಾರ್ಗ'ಗಳೆಂಬ ಎರಡು ಮಾರ್ಗಗಳನ್ನು ಜನರಿಗೆ ಬೋಧಿಸುತ್ತದೆ. ಇವು ಗಳಲ್ಲಿ ಪ್ರವೃತ್ತಿ ಮಾರ್ಗವು ಸಕಲರಿಗೂ ಅನ್ವಯಿಸುತ್ತದೆ. ಮನುಷ್ಯರೆಲ್ಲರೂ ಸಾಮಾನ್ಯವಾಗಿ ಅರ್ಥ ಕಾಮಗಳನ್ನು ಬಯಸತಕ್ಕವರೇ ಆಗಿರುತ್ತಾರೆ. ಅರ್ಥ ಕಾಮಗಳನ್ನು ಸಂಪಾದಿಸಿ ಸುಖಜೀವನವನ್ನು ಸಾಗಿಸುವುದು ಎಲ್ಲರಿಗೂ ಇಷ್ಟವಾದದ್ದು. ಆದರೆ ಇವನ್ನು ಧರ್ಮಮಾರ್ಗದಿಂದ ಸಂಪಾದಿಸಿ, ಧರ್ಮಮಾರ್ಗದಿಂದಲೇ ಭೋಗಿಸಬೇಕೆಂದು ಶಾಸ್ತ್ರವು ತಿಳಿಸಿಕೊಡುತ್ತದೆ. ಇದೇ ಶಾಸ್ತ್ರದ ವೈಶಿಷ್ಟ್ಯ. ಹೀಗೆ ಧರ್ಮಮಾರ್ಗದಿಂದ ಸಂಪಾದಿಸಿ ಭೋಗಿಸುವುದಕ್ಕೆ **ಅಭ್ಯುದಯ** ಎನ್ನುತ್ತಾರೆ. ಆದರೆ ಇದೇ ಮನುಷ್ಯ ಜೀವನದ ಮುಖ್ಯ ಧ್ಯೇಯವಲ್ಲ. ಜ್ಞಾನಮಾರ್ಗದಿಂದ ಮೋಕ್ಷವನ್ನು ಪಡೆಯುವುದೇ ಮನುಷ್ಯಜನ್ಮದ ಪರಮೋತ್ತಮವಾದ ಗುರಿ. ಆದ್ದರಿಂದ ಧರ್ಮ, ಅರ್ಥ, ಕಾಮ, ಮೋಕ್ಷ – ಇವು ನಾಲ್ಕು

ಪುರುಷಾರ್ಥಗಳೆಂದು ಭಾರತೀಯರ ಸಿದ್ಧಾಂತವಾಗಿದೆ. ಪುರುಷಾರ್ಥವೆಂದರೆ ಮನುಷ್ಯನ ಜೀವನದ ಗುರಿ ಎಂದರ್ಥ. ಈ ಗುರಿಯನ್ನು ಪಡೆಯಲು ಧರ್ಮವು 'ಸಾಧನ', ಅರ್ಥ ಕಾಮ ಮೋಕ್ಷಗಳು 'ಸಾಧ್ಯ' ಎಂದು ವಿಭಾಗ. ಮೋಕ್ಷವು ಧರ್ಮಮಾರ್ಗದಿಂದಲೇ ಸಾಧ್ಯವಾಗುವಂಥದ್ದು. ಹಿಂದೆ ಹೇಳಿದ ಅರ್ಥ ಕಾಮಗಳ ಭೋಗಗಳೆಂಬ ಅಭ್ಯುದಯವನ್ನು ಧರ್ಮಮಾರ್ಗದಿಂದ ಸಂಪಾದಿಸಿ ಭೋಗಿಸುತ್ತ ಇರುವವನಿಗೆ ಚಿತ್ತಶುದ್ಧಿಯುಂಟಾಗುತ್ತದೆ. ನಮ್ಮ ಚಿತ್ತಕ್ಕೆ ಪ್ರಾಚೀನ ಜನ್ಮಗಳಲ್ಲಿ ಮಾಡಿದ ಕರ್ಮಗಳಿಂದ ಹುಟ್ಟಿದ ಕಾಮ ಕ್ರೋಧಾದಿ ಸಂಸ್ಕಾರಗಳು ಬಲವಾಗಿ ಅಂಟಿಕೊಂಡಿರುತ್ತವೆ. ಅವುಗಳ ನಿವೃತ್ತಿಯೇ ಚಿತ್ತಶುದ್ಧಿ. ಚಿತ್ತಶುದ್ಧಿಯಾಗದೇ ಮನುಷ್ಯನಿಗೆ ಆತ್ಮಜ್ಞಾನವುಂಟಾಗುವುದಿಲ್ಲ, ಆತ್ಮಜ್ಞಾನವಾಗದೇ ಮೋಕ್ಷವಿಲ್ಲ.

ಮೋಕ್ಷಕ್ಕಾಗಿ ಇಚ್ಛೆಯುಂಟಾದ ಮೇಲೆ ಮಾನವನು ಜ್ಞಾನಮಾರ್ಗದಲ್ಲಿ ಪ್ರವೃತ್ತನಾಗುತ್ತಾನೆ. ಇದೇ ನಿವೃತ್ತಿ ಮಾರ್ಗ. ನಿವೃತ್ತಿಮಾರ್ಗವೇ ಪ್ರಧಾನವಾದದ್ದು. ಇದನ್ನು ಪಡೆಯುವುದಕ್ಕಾಗಿ ಬೇಕಾದ ಅರ್ಹತೆಯನ್ನು ಸಂಪಾದಿಸುವುದಕ್ಕಾಗಿ ಪ್ರವೃತ್ತಿಮಾರ್ಗವು ಉಪದಿಷ್ಟವಾಗಿದೆ. ಈ ಬಗೆಯಲ್ಲಿ ಕರ್ಮಯೋಗ, ಜ್ಞಾನಯೋಗ – ಇವೆರಡೂ ವೇದೋಕ್ತವಾದ ಶ್ರೇಯೋಮಾರ್ಗಗಳೇ ಆಗಿವೆ.

ಭೃಗುವಲ್ಲಿಯಲ್ಲಿ ಜ್ಞಾನಮಾರ್ಗದ ನಿರೂಪಣೆ ಬರುತ್ತದೆ. ಭೃಗು ಎಂಬುವವನು ಕರ್ಮಯೋಗವನ್ನಾಚರಿಸಿ ಚಿತ್ತಶುದ್ಧಿಯನ್ನು ಪಡೆದ ಮೇಲೆ, ಅವನಿಗೆ ಬ್ರಹ್ಮವಸ್ತುವಿನ ಅಂದರೆ ಪ್ರತ್ಯಗಾತ್ಮನ ಜ್ಞಾನವನ್ನು ಪಡೆಯಬೇಕೆಂಬ ತೀವ್ರವಾದ ಇಚ್ಛೆಯುಂಟಾಗುತ್ತದೆ. ಆತನು ತನ್ನ ತಂದೆಯೂ ಬ್ರಹ್ಮಜ್ಞಾನಿಯೂ ಆದ ವರುಣನ ಬಳಿಗೆ ಬಂದು **'ಅಧೀಹಿ ಭಗವೋ ಬ್ರಹ್ಮ'** – "ಹೇ ಭಗವಂತನೇ, ಬ್ರಹ್ಮವೆಂದರೇನೆಂಬುದನ್ನು ನನಗೆ ಉಪದೇಶಿಸು" ಎಂದು ವಿನಯದಿಂದ ಪ್ರಾರ್ಥಿಸುತ್ತಾನೆ. ಆಗ ವರುಣನು ನೇರವಾಗಿ ಬ್ರಹ್ಮಸ್ವರೂಪವನ್ನು ಹೇಳುವುದಿಲ್ಲ. ಭೃಗುವು ವಿದ್ವಾಂಸನಾದ್ದರಿಂದ ಸ್ವತಃ ಚಿಂತಿಸಿ ಮನನ ಮಾಡಿ, ನಿದಿಧ್ಯಾಸನದಿಂದ ಬ್ರಹ್ಮಸ್ವರೂಪವನ್ನು ಅರಿತುಕೊಳ್ಳಬಲ್ಲನು ಎಂದು ನಿಶ್ಚಯಿಸಿ, "ಅಯ್ಯಾ ಭೃಗು, ತಪಸ್ಸಿನಿಂದ ಬ್ರಹ್ಮಸ್ವರೂಪವನ್ನು ತಿಳಿದುಕೋ" ಎಂದು ಹೇಳಿದನು. ಅನಂತರ ವರುಣನು ಬ್ರಹ್ಮದ ತಟಸ್ಥಲಕ್ಷಣವನ್ನು ಹೀಗೆ ತಿಳಿಸುತ್ತಾನೆ: "ಹಿರಣ್ಯಗರ್ಭದಿಂದ ಹಿಡಿದು ಸಕಲ ಜೀವಿಗಳೂ ಯಾವುದರಿಂದ ಜನಿಸುತ್ತವೆಯೋ, ಯಾವುದರಿಂದ ಜೀವಿಸುತ್ತವೆಯೋ, ಯಾವುದರ ಬಲದಿಂದ ಪ್ರಾಣವನ್ನು ಹಿಡಿದುಕೊಂಡಿರುತ್ತವೆಯೋ, ಯಾವುದರಲ್ಲಿ ಲಯ ಹೊಂದುತ್ತವೆಯೋ ಮತ್ತು ಉತ್ಪತ್ತಿ ಸ್ಥಿತಿ ಲಯ ಕಾಲಗಳಲ್ಲಿ ಯಾವುದರೊಡನೆ ತಾದಾತ್ಮ್ಯವನ್ನು ಹೊಂದಿಯೇ ಇರುತ್ತವೆಯೋ ಅದೇ ಬ್ರಹ್ಮ."

ತಂದೆಯ ಆದೇಶದಂತೆ ಭೃಗುವು ಶಾಸ್ತ್ರೋಕ್ತವಾದ ತಪಸ್ಸನ್ನೂ, ವಿಚಾರಾತ್ಮಕವಾದ ತಪಸ್ಸನ್ನೂ, ದೀರ್ಘಕಾಲ ನಡೆಸಿದನು. ಮೊದಲು ಅನ್ನ, ಪ್ರಾಣ, ಮನಸ್ಸು ಮತ್ತು ವಿಜ್ಞಾನಗಳನ್ನು ಕ್ರಮವಾಗಿ ಬ್ರಹ್ಮವೆಂದು ತಿಳಿದು, ಆಮೇಲೆ ಅವುಗಳನ್ನು ನಿರಾಕರಿಸುತ್ತ ಹೋದನು. ಕಡೆಯಲ್ಲಿ ಸರ್ವಾಂತರತಮವೂ ಸರ್ವರ ಹೃದಯದಲ್ಲಿ ನೆಲೆಸಿರುವುದೂ ಆದ ಆನಂದವೇ ಬ್ರಹ್ಮವೆಂದು ನಿರ್ಧರಿಸಿದನು. ಇದನ್ನು ವರುಣನೂ ಒಪ್ಪಿದನು.

ಹೀಗೆ ತಪಸ್ಸನ್ನು ಒತ್ತಿ ಹೇಳುವ ಶ್ರುತಿಯ ತಾತ್ಪರ್ಯವೇನೆಂದರೆ. ಬ್ರಹ್ಮಜಿಜ್ಞಾಸುವಾದವನು ತನ್ನ ಬಾಹ್ಯೇಂದ್ರಿಯಗಳನ್ನೂ, ಅಂತಃಕರಣವನ್ನೂ ಶಾಂತಸ್ಥಿತಿಗೆ ತಂದುಕೊಳ್ಳಬೇಕು, ವಿಚಾರವನ್ನು ಮುಂದುವರಿಸಬೇಕು ಎಂಬುದೇ ಆಗಿದೆ. ಈ ಭೃಗುವಲ್ಲಿಯಲ್ಲಿ ಮುಂದೆ ಆತ್ಮನ ವಿಚಾರವಾಗಿ ಹಲವಾರು ವಿಷಯಗಳನ್ನು ಉಪಾಸನಾ ದೃಷ್ಟಿಯಿಂದ ತಿಳಿಸಲಾಗಿದೆ.

ತೈತ್ತಿರೀಯದ ಆದಿಯಲ್ಲಿ ಬಂದಿರುವ ಶೀಕ್ಷಾವಲ್ಲಿಯೂ, ಅಂತ್ಯದಲ್ಲಿ ಬಂದಿರುವ ಭೃಗುವಲ್ಲಿಯೂ, ಮಧ್ಯದಲ್ಲಿರುವ ಬ್ರಹ್ಮವಲ್ಲಿಯೂ ಎರಡು ಕೈಗಳಂತೆಯೂ, ಪಕ್ಷಿಯ ಎರಡು ರೆಕ್ಕೆಗಳಂತೆಯೂ ಇವೆಯೆನ್ನಬಹುದು. ಇವುಗಳ ಮುಖ್ಯ ಶರೀರವೇ ಬ್ರಹ್ಮವಲ್ಲಿ. ಇದು ಆತ್ಮನಿರುವ ಹೃದಯಸ್ಥಾನ. ಸರ್ವಗತವೂ ಅಪರಿಚ್ಛಿನ್ನವೂ ಆದ ಬ್ರಹ್ಮವನ್ನು ಮನುಷ್ಯನು ಹೊಸದಾಗಿ ಪಡೆಯಬೇಕಾಗಿಲ್ಲ. ತನ್ನಲ್ಲಿರುವ ಆತ್ಮವನ್ನು ಸ್ಪಷ್ಟವಾಗಿ ಗುರುತಿಸುವುದೇ ಬ್ರಹ್ಮವಿದ್ಯೆ. ಈ ವಲ್ಲಿಯ ಆರಂಭದಲ್ಲಿ ಬ್ರಹ್ಮವಿದನು ಬ್ರಹ್ಮವನ್ನು ಪಡೆಯುತ್ತಾನೆ ಎಂದು ಹೇಳಿದೆ. 'ಪಡೆಯುತ್ತಾನೆ' ಎಂದರೆ ಜ್ಞಾನಿಯು ಬ್ರಹ್ಮವೇ ಆಗಿಬಿಡುತ್ತಾನೆ ಎಂದರ್ಥ. **'ಬ್ರಹ್ಮವಿದ್ ಬ್ರಹ್ಮೈವ ಭವತಿ'** ಎಂಬ ಶ್ರುತಿಯು ಇದಕ್ಕೆ ಪ್ರಮಾಣವಾಗಿದೆ. 'ಬ್ರಹ್ಮ' ಎಂಬ ಶಬ್ದಕ್ಕೆ ದೊಡ್ಡದು ಎಂದು ಅರ್ಥವಾಗುತ್ತದೆ. ಆಕಾರದಲ್ಲಿ ದೊಡ್ಡದು ಎಂದು ಅಭಿಪ್ರಾಯವಲ್ಲ. ಆದ್ದರಿಂದ ನಿಜ ಸ್ವರೂಪವನ್ನು ತಿಳಿಸುವುದಕ್ಕಾಗಿ **'ಸತ್ಯಂ ಜ್ಞಾನಮನಂತಂ ಬ್ರಹ್ಮ'** ಎಂದು ಈ ವಲ್ಲಿಯು ಹೇಳುತ್ತದೆ. ಇದನ್ನು ಬ್ರಹ್ಮದ ಸ್ವರೂಪ ಲಕ್ಷಣವೆಂದು ಹೇಳುತ್ತಾರೆ, ಇಲ್ಲಿ ಬ್ರಹ್ಮವು ಲಕ್ಷ್ಯ. ಉಳಿದ ಮೂರು ವಿಶೇಷಣಗಳು ಅದರ ಲಕ್ಷಣ.

ಮೊದಲನೆಯದು **'ಸತ್ಯಂ'** ಎಂದು. ಸತ್ಯವೆಂದರೇನು? ಯಾವ ವಸ್ತುವು ಯಾವ ಸ್ವರೂಪವುಳ್ಳದ್ದೆಂದು ನಿಶ್ಚಿತವಾಗಿದೆಯೋ, ಆ ಸ್ವರೂಪವನ್ನು ಅದು ಎಂದಿಗೂ ತ್ಯಜಿಸದಿದ್ದರೆ, ಆಗ ಅದು ಸತ್ಯವೆನಿಸುತ್ತದೆ. ಉದಾಹರಣೆಗೆ ಹಗ್ಗ. ಹಗ್ಗವು ಯಾವಾಗಲೂ ಹಗ್ಗವಾಗಿಯೇ ಇರುತ್ತದೆ. ಅದು ಹಾವು ಎಂದು ಒಬ್ಬನು ಭ್ರಮಿಸಿದಾಗ ಹಾವು ಸತ್ಯವಲ್ಲ. ಏಕೆಂದರೆ ಹತ್ತಿರ ಹೋಗಿ ನೋಡಿದಾಗ ಹಾವು ತನ್ನ ಸ್ವರೂಪವನ್ನು ಕಳೆದುಕೊಂಡು, ಹಗ್ಗವಾಗಿಬಿಟ್ಟಿರುತ್ತದೆ. ಆದ್ದರಿಂದ ಹಾವು ಸತ್ಯವಲ್ಲ, ಹಗ್ಗ ಸತ್ಯ. ಹಾಗೆಯೇ ಮಣ್ಣಿನ ವಿಕಾರವಾದ ಗಡಿಗೆ ಸತ್ಯವಲ್ಲ, ಮಣ್ಣು ಸತ್ಯ. ಛಾಂದೋಗ್ಯ ಶ್ರುತಿಯು **ವಾಚಾರಂಭಣಂ ವಿಕಾರೋ ನಾಮಧೇಯಂ ಮೃತ್ತಿಕೇತ್ಯೇವ ಸತ್ಯಮ್** ಎಂದು ಹೇಳಿದೆ. ಗಡಿಗೆ, ಹರವಿ,